## ಮರು ಮೌಲ್ಯಮಾಪನ



‘ನಾನೀಗ ಸುರೇಶನ ಗೆಳೆತನ ಬಿಟ್ಟಿದ್ದೇನೆ’ ಎಂದು ಮಂಜುನಾಥ ತನ್ನ ಗೆಳೆಯ ಮಲ್ಲೇಶನ ಬಳಿ ಬೇಸರದ ಧ್ವನಿಯಲ್ಲಿ ಹೇಳಿಕೊಂಡ. ‘ಯಾಕೆ, ನೀವಿಬ್ಬರೂ ಆತ್ಮೀಯ ಗೆಳೆಯರಾಗಿದ್ದೀರಲ್ಲ, ಈಗೇನಾಯ್ತು?’ ಎಂದು ಮಲ್ಲೇಶ ಆತಂಕದಿಂದ ಕೇಳಿದ. ಅದಕ್ಕೆ ಮಂಜುನಾಥ, ‘ನಾನು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಪಾಸಾಗಿದ್ದೆ; ಇನ್ನೂ ಹೆಚ್ಚು ಅಂಕ ಸಿಗಬಹುದು, ಮರು ಮೌಲ್ಯಮಾಪನಕ್ಕೆ ಹಾಕು ಅಂತ ಸುರೇಶ ಹೇಳಿದ. ಅವನ ಮಾತು ನಂಬಿ ಹಾಗೆಯೇ ಮಾಡಿದೆ. ಈಗ ನಾನು ಫೇಲ್ ಅಂತ ಫಲಿತಾಂಶ ಬಂದಿದೆ...’ ಎಂದು ಮಲ್ಲೇಶನ ಮುಖ ನೋಡಿದ, ಮಂಜುನಾಥ!

**ದೇವಿದಾಸ ಸುವರ್ಣ**

## ಧಿಮಾಕು!



ಗುಂಡ ಯಾವುದೋ ಕೆಲಸದ ಮೇಲೆ ಹೋಗುತ್ತಿದ್ದಾಗ ರಸ್ತೆಯಲ್ಲಿ ಒಬ್ಬ ಭಿಕ್ಷುಕ ಒಂದು ತಟ್ಟೆಯನ್ನಿಟ್ಟು ಅದರ ಮುಂದೆ ಫಲಕದಲ್ಲಿ ಹೀಗೆ ಬರೆದಿದ್ದನು: ‘ಈಗ ನನ್ನ ನಿದ್ರಾಸಮಯ, ದಯಮಾಡಿ ಚಿಲ್ಲರೆ ಹಾಕಿ ನಿದ್ರೆಗೆ ಭಂಗ ಮಾಡಬೇಡಿ; ಕೇವಲ ನೋಟನ್ನು ಮಾತ್ರ ಹಾಕಿ’. ಇದನ್ನು ಓದಿ ಗುಂಡನಿಗೆ ಕೆಂಡಾಮಂಡಲ ಸಿಟ್ಟು ಬಂದು ತನ್ನ ಹತ್ತಿರವಿದ್ದ ಚಿಲ್ಲರೆಯನ್ನೆಲ್ಲಾ ಮೇಲಿನಿಂದ ಸಪ್ಪಳ ಬರುವಂತೆ ಹಾಕಿ ಬುಸುಗುಡುತ್ತಾ ಹೋದ!

**ವಿ. ವಿಜಯೇಂದ್ರ ರಾವ್**